(SRI K. HANUMANTHAIYA.) needs further information; I will be very happy to give him.

ಶ್ರೀ ಜಿ. ಪುಟ್ಟಸ್ವಾಮಿ.—ಈ ಬ್ಲಾಕುಗಳಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಯಾರೆಂಬುದನ್ನು ಹೇಳುತ್ತೀರಾ?

Mr. SPEAKER.—It is not possible to give the information.

ಶ್ರೀ ಜಿ. ಪುಟ್ಟಸ್ವಾಮಿ.—ಈ ಬ್ಲಾಕುಗಳಲ್ಲಿ ಕೆಲಸ ಮುಂದುವರಿಸಲು ಸಬ್ ಇಂಜಿನಿಯರುಗಳಿಲ್ಲದೆ ಬಹಳ ತೊಂದರೆಯಾಗಿರುತ್ತದೆಯೆಂಬ ಅಂಶ ಸರ್ಕಾರದವರ ಅವಗಾಹನೆಗೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಈಗ ಅವರೆಲ್ಲರನ್ನೂ ನೇಮಿಸುತ್ತಿದ್ದೇವೆ. ಅಭಿವೃದ್ಧಿ ಕೆಲಸಕಾರ್ಯಗಳೆಲ್ಲಾ ಸರಾಗವಾಗಿ ನಡೆಯುತ್ತಿವೆ.

ಶ್ರೀ ಜಿ. ಪುಟ್ಟಸ್ವಾಮಿ.—ಮೂಡಿಗೆರೆ ತಾಲ್ಲೂಕಿಗೆ ಇವರನ್ನು ಯಾವಾಗ ನೇಮಕಮಾಡುತ್ತೀರಿ?

ಡಾ॥ ಆರ್. ನಾಗನಗೌಡ.—ನೋಟೀಸ್.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಮುಂದಿನ ಸಾಲಿನಲ್ಲಿ ಈ ನ್ಯಾಷನಲ್ ಎಕ್ಸ್‌ಟೆಕ್ಷನ್ ಬ್ಲಾಕುಗಳನ್ನು ಎಷ್ಟು ತೆರೆಯಬೇಕೆಂಬ ವಿಚಾರದಲ್ಲಿ ಇಂಡಿಯಾ ಸರ್ಕಾರದವರಿಂದ ತಮಗೇನಾದರೂ ವರ್ತಮಾನ ಬಂದಿದೆಯೇ?

ಡಾ॥ ಆರ್. ನಾಗನಗೌಡ —ಬಂದಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹಾಗಾದರೆ ಎಷ್ಟು ಬ್ಲಾಕುಗಳು?

ಡಾ॥ ಆರ್. ನಾಗನಗೌಡ.—ಐದು ಬ್ಲಾಕುಗಳು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಬ್ಲಾಕುಗಳಲ್ಲಿ ವ್ಯವಸಾಯಾಭಿವೃದ್ಧಿ ಕೆಲಸವೇ ಬಹಳ ಮುಖ್ಯವಾದುದಲ್ಲವೇ? ಇದಕ್ಕೆ ರೆವಿನ್ಯೂ ಅಧಿಕಾರಿಗಳಿಂದ ಏನಾಗುತ್ತದೆ?

ಡಾ॥ ಆರ್. ನಾಗನಗೌಡ.—ಆದಾಗ್ಯೂ ಕೂಡ ರೆವಿನ್ಯೂ ಅಧಿಕಾರಿಗಳಿಂದಲೂ ಒಂದು ಬಗೆಯಲ್ಲಿ ಈ ಅಭಿವೃದ್ಧಿ ಕೆಲಸಗಳು ಆಗುತ್ತಿವೆ. ಇವರು 'ಅಡ್ಮಿನಿಸ್ಟ್ರೇಟಿವ್' ಅಧಿಕಾರಿಗಳಾಗಿದ್ದಾರೆ. ಇವರ ಕೈಕೆಳಗೆ ವ್ಯವಸಾಯದ ಪದವೀಧರರು, ಸಹಕಾರ ತತ್ವದಲ್ಲಿ ಶಿಕ್ಷಣ ಹೊಂದಿದವರು ಇತ್ಯಾದಿ ಜನರನ್ನು ನೇಮಕಮಾಡಲಾಗಿದೆ. ಇವರೆಲ್ಲರಿಂದಲೂ ಕೆಲಸ ಸಾಮ್ಯದಿಂದ ಮುಂದುವರಿಯುತ್ತಿದೆ.

Sri B. P. NAGARAJA MURTHY.—Is it not a fact that the National Extension Service Block was started at Malavalli after the winding up of the Ford Foundation Scheme?

Dr. R. NAGAN GOWDA.—It was started in April 1954. The Ford Foundation Training Centre was there; it was converted into National Extension Service Block.

ಶ್ರೀ ಬಿ. ರಾಚಯ್ಯ.—ಈ ಡೆವಲಪ್‌ಮೆಂಟ್ ಬ್ಲಾಕುಗಳಿಗೆ ನೇಮಿಸಿಕೊಳ್ಳುವ ಅಫೀಸರುಗಳನ್ನು ತಾವೇ ಡೈರೆಕ್ಟಾಗಿ ನೇಮಕಮಾಡಿಕೊಳ್ಳುತ್ತೀರೋ ಅಥವಾ ಹೇಗೆ ನೇಮಕ ಮಾಡಿಕೊಳ್ಳುತ್ತೀರಿ?

Mr. SPEAKER.—You are going beyond the scope of the question. The question is with regard to the selection of the Blocks.

Mr. SPEAKER.—Question No. 1 tabled by Sri Venkatappa can now be taken up. The concerned Minister is not present. I do not know whether any of the Ministers present will answer.

Sri K. HANUMANTHAIYA.—Tomorrow it may be taken up.

Mr. SPEAKER.—Yes. Questions are over.

QUESTION FOR ANSWER ON THE DAY

(but not taken up).

Beggar Relief Centres in the State.

Q.—78. Sri B. MADHAVACHAR (Bhadravathi).—

Will the Government be pleased to state :—

(*a*) the number of Beggar Relief Centres working in the State;

(*b*) whether they will consider giving a Centre for every District Headquarters?

A.—Dr. R. NAGAN GOWDA (Minister for Agriculture).—

(*a*) One at Bangalore.

(*b*) The suggestion will be examined.

Panel of Chairmen.

Mr. SPEAKER.—Under rule 6 of the Rules of Procedure and Conduct of Business in the Legislative Assembly the following members will constitute the Panel of Chairmen for this session of the Legislative Assembly, namely :—

Sriyuts—

1 H. M. Channabasappa,
2 K. Lakkappa,
3 B. Rachaiah,
4 Ijari Sirasappa.